**<u>ಸಾಕ್ಷಿಗೆ ದಿನಾಂಕ 14.10.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ.ಎನ್.ಎಂ.ಪಿ. ವಕೀಲರಿಂದಃ</u>**

1. ಪೊಲೀಸರ ಮುಂದೆ ನೀಡಿದ ಹೇಳಿಕೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸಿಸಿಟಿವಿ ದೃಶ್ಯಾವಳಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸಿಸಿಟಿವಿ ದೃಶ್ಯಾವಳಿಗಳನ್ನು ಕಲೆಹಾಕಲು ಯಾವುದೇ ಪ್ರಯತ್ನ ಮಾಡಿಲ್ಲ ಎಂದರೆ ಸರಿ. ಸಿಸಿಟಿವಿ ದೃಶ್ಯಾವಳಿಗಳ ಬಗ್ಗೆ ಯಾರು ಹೇಳಿದ್ದಾರೆ ಎಂದು ನನಗೆ ನೆನಪಿಲ್ಲ. ಅಪಘಾತದ ನಂತರ ನಾನು ಮತ್ತು ನನ್ನ ಮಗ ಗುರುಶ್ರೀ ಆಸ್ಪತ್ರೆಗೆ ದಾಖಲಾಗಿದ್ದೇವು. ಸದರಿ ಆಸ್ಪತ್ರೆಯಲ್ಲಿ ಅಪಘಾತದ ಹಿನ್ನೆಲೆಯ ಬಗ್ಗೆ ಮಾಹಿತಿ ನೀಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆಸ್ಪತ್ರೆಯ ಎಂ ಎಲ್ ಸಿ ಮತ್ತು ಪೊಲೀಸ್ ಇಂಟಿಮೇಷನ್ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ನಿಪಿ.5 ಮತ್ತು 19 ರಲ್ಲಿ ಅಪಘಾತಪಡಿಸಿದ ವಾಹನದ ಸಂಖ್ಯೆ ನಮೂದಾಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

2. ಆಟೋ ರಿಕ್ಷಾ ನಂಬರ್ ಮಾರನೇ ದಿನ ಗೊತ್ತಾಗಿರುತ್ತದೆ, ಹಾಗಾಗಿ ದೂರಿನಲ್ಲಿ ಆಟೋದ ನಂಬರನ್ನು ನಮೂದಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ಗುರುಶ್ರೀ ಆಸ್ಪತ್ರೆಯಲ್ಲಿ ಅಪಘಾತಪಡಿಸಿದ ವಾಹನದ ನಂಬರನ್ನು ಹೇಳಲು ತೊಂದರೆ ಇರಲಿಲ್ಲ ಎಂದರೆ ನನಗೆ ಪ್ರಜ್ಞೆ ಇರಲಿಲ್ಲ. ನನಗೆ ಚಾಲನಾ ಪರವಾನಗಿ ಪತ್ರ ಇತ್ತು ಆದರೆ ಅದು ಅಪಘಾತದ ಸಮಯದಲ್ಲಿ ಕಳೆದು ಹೋಗಿರುತ್ತದೆ. ಸದರಿ ಚಾಲನಾ ಪರವಾನಗಿ ಪತ್ರದ ಬಿ-ಎಕ್ಸ್ ಟ್ರಾಕ್ಟ್ ನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ನಾನೇ ಸ್ವತಃ ಬಿದ್ದು ಅಪಘಾತಪಡಿಸಿಕೊಂಡಿದ್ದರೂ ಸಹ ಪರಿಹಾರ ಪಡೆಯುವ ಸಲುವಾಗಿ ನನಗೆ ಡಿಎಲ್ ಇಲ್ಲದೇ ಇರುವ ಕಾರಣ ಬೇರೆ ವಾಹನವನ್ನು ಸುಳ್ಳಾಗಿ ಸೇರಿಸಿದ್ದೇನೆ ಎಂದರೆ ಸರಿಯಲ್ಲ.

3. ಆಟೋರಿಕ್ಷಾದ ನಂಬರನ್ನು ಯಾವ ರೀತಿ ಪತ್ತೆ ಹಚ್ಚಲಾಗಿದೆ ಎಂದು ತನಿಖಾಧಿಕಾರಿಯ ಸಾಕ್ಷ್ಯ ಮಾಡಿಸಲು ತೊಂದರೆ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆಟೋರಿಕ್ಷಾ ನನಗೆ ಡಿಕ್ಕಿಪಡಿಸಿಲ್ಲ ಮತ್ತು ಆಟೋ ರಿಕ್ಷಾದಿಂದ ಯಾವುದೇ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ನನ್ನ ದ್ವಿಚಕ್ರ ವಾಹನದ ಮುಂಭಾಗ ಜಖಂಗೊಂಡಿತ್ತು. ಆಟೋರಿಕ್ಷಾದ ಜಖಂಗಳ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ.9 ವಾಹನ ನೀರಿಕ್ಷಕರ ವರದಿಯಲ್ಲಿ ಆಟೋಗೆ ಯಾವುದೇ ಜಖಂಗಳು ಉಂಟಾಗಿಲ್ಲ ಎಂದು ವರದಿ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಚಲಾಯಿಸುತ್ತಿದ್ದ ವಾಹನ ನನ್ನ ತಪ್ಪಿನಿಂದ ಬಿದ್ದಿರುವ ಕಾರಣ ಅದಕ್ಕೆ ಜಖಂಗಳು ಆಗಿದ್ದು, ಆಟೋರಿಕ್ಷಾ ಅಪಘಾತದಲ್ಲಿ ಭಾಗಿಯಾಗದೇ ಇರುವುದರಿಂದ ಆಟೋಗೆ ಯಾವುದೇ ಜಖಂಗಳು ಆಗಿಲ್ಲ ಎಂದರೆ ಸರಿಯಲ್ಲ.

4. ಪೊಲೀಸರಿಗೆ ಅಪಘಾತದ ಸ್ಥಳವನ್ನು ನನ್ನ ಮಗ ತೋರಿಸಿರುತ್ತಾನೆ. ನನ್ನ ಮಗನ ಹೆಸರು ಮಂಜು.ಬಿ.ಎಸ್. ಮನೋಜ್ ಮತ್ತು ಕೀರ್ತಿರಾಜ್ ಯಾರು ಎಂದು ನನಗೆ ಗೊತ್ತಿರುವುದಿಲ್ಲ. ಮನೋಜ್ ಮತ್ತು ಕೀರ್ತಿರಾಜ್ ರವರ ಸಾಕ್ಷ್ಯ ಮಾಡಿಸಬಹುದು ಎಂದರೆ ನನಗೆ ಪರಿಚಯ ಇರುವುದಿಲ್ಲ. ಗುರುಶ್ರೀ ಆಸ್ಪತ್ರೆಯಲ್ಲಿ ನನಗೆ ಯಾವುದೇ ಶಸ್ತ್ರಚಿಕಿತ್ಸೆ ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನಗೆ ಸಾಮಾನ್ಯ ಸ್ವರೂಪದ ಗಾಯಗಳು ಆಗಿದ್ದವು ಎಂದರೆ ಸರಿಯಲ್ಲ. ನಾನು ಮುಂದುವರೆದ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ನನ್ನ ವೈದ್ಯಕೀಯ ಮತ್ತು ಇತರೆ ಖರ್ಚುಗಳಿಗೆ ರೂ.3,00,000/- ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ 56 ವರ್ಷ ವಯಸ್ಸಾಗಿದೆ ಎಂದರೆ ಸರಿಯಲ್ಲ. ನಾನು ಕೂಲಿ ಕೆಲಸ ಮಾಡಿ ರೂ.20,000/- ತಿಂಗಳಿಗೆ ಸಂಪಾದಿಸುತ್ತಿದ್ದೇನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತಕ್ಕಿಂತ ಮುಂಚೆ ಹೇಗೆ ಇದ್ದೇನೋ ಹಾಗೆಯೇ ಈಗಲೂ ಇದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಅಪಘಾತವಾಗದೇ ಇದ್ದರೂ ಕೂಡ ಪರಿಹಾರ ಪಡೆಯುವ ಉದ್ದೇಶದಿಂದ ಆಟೋರಿಕ್ಷಾದ ಮಾಲೀಕರೊಂದಿಗೆ ಮತ್ತು

ಪೊಲೀಸರೊಂದಿಗೆ ಶಾಮೀಲಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಒಂದನೇ ಎದುರುದಾರರು ಮತ್ತು ಅವರ ಪರ ವಕೀಲರು ಗೈರುಹಾಜರು. ಈ ಕಾರಣದಿಂದ ಪಾಟೀಸವಾಲು ಇಲ್ಲ ತೆಗೆದುಕೊಳ್ಳಲಾಗಿರುತ್ತದೆ.**

**<u>ಮರು ವಿಚಾರಣೆಃ ಇಲ್ಲ.</u>**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**